

بسم اللهِ الرّحمٰن الرّحيم

# ಅಲ್ಲಾಹನ ಮಾರ್ಗದಲ್ಲಿ ಬಲಿದಾನ ಅರ್ಪಿಸುವುದರ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **23-05-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಪವಿತ್ರ ಖುರ್‌ಆನಿನ ಸೂರ ಆಲಿ ಇಮ್ರಾನಿನ ವಚನ 146ರಿಂದ 149ರ ತನಕ ಮತ್ತು 170ರಿಂದ 172ರ ತನಕ ತಿಲಾವತ್ ಮಾಡಿದರು. ಈ ವಚನಗಳಲ್ಲಿ ಅಲ್ಲಾಹನ ಮಾರ್ಗದಲ್ಲಿ ಬಲಿದಾನ ಅರ್ಪಿಸುವ ಮಹತ್ವದ ಬಗ್ಗೆ ವಿವರಿಸಲಾಗಿದೆ.

ಹಝ್ರತ್ ಖಲೀಫತುಲ್ ಮಸೀಹರು ಹೇಳಿದರು: ಅಲ್ಲಾಹನು ತನ್ನ ಅನುಗ್ರಹದ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಎಂತಹ ಜನರನ್ನು ನೀಡಿರುವನೆಂದರೆ ಅವರು ತಾವು ಮಾಡಿದ ಪ್ರತಿಜ್ಞೆಗಳ ಆತ್ಮವನ್ನು ಅರಿತು ಕೊಂಡಿರುತ್ತಾರೆ. ಅವರು ಬಲಿದಾನದ ಆತ್ಮವನ್ನೂ ಅರಿತಿದ್ದಾರೆ. ಅವರು ಅದನ್ನು ತಿಳಿದುಕೊಂಡಿರುವುದು ಮಾತ್ರವಲ್ಲ ಅವರು ಎಂತಹ ಉದಾಹರಣೆಗಳನ್ನು ಸ್ಥಾಪಿಸಿರುವರೆಂದರೆ ಅಂತಹ ಉದಾಹರಣೆ ಇಂದಿನ ಕಾಲದಲ್ಲಿ ಬೇರೆ ಎಲ್ಲಿಯೂ ಕಾಣಲು ಸಿಗಲಾರದು. ಸಂಪತ್ತನ್ನು ತ್ಯಾಗ ಮಾಡುವ ಪ್ರಶ್ನೆ ಉಂಟಾದಾಗ ಧರ್ಮಕ್ಕೋಸ್ಕರ ಆರ್ಥಿಕ ಬಲಿದಾನ ಮಾಡಲು ಸಿದ್ಧರಾದವರು ಯಾರಿದ್ದಾರೆ ಎಂದು ಕೇಳಿದಾಗ ಜಮಾಅತಿನ ಜನರ ಗುಂಪು ಮುಂದೆ ಬಂದು ನಿಲ್ಲುತ್ತದೆ. ಸಮಯದ ಬಲಿದಾನದ ಬಗ್ಗೆ ಹೇಳುವುದಾದರೆ ಇಂದಿನ ಕಾಲದಲ್ಲಿ ಅಹ್ಮದಿಯಾ ಜಮಾಅತಿನ ಜನರು ಧರ್ಮಕ್ಕೋಸ್ಕರ ತಮ್ಮ ಸಮಯವನ್ನು ಬಲಿದಾನವಾಗಿ ನೀಡುವ ಉನ್ನತ ಉದಾಹರಣೆಗಳು ಇವೆ. ತಮ್ಮ ಅಭಿಮಾನ ಮತ್ತು ಗೌರವವನ್ನು ಧರ್ಮಕ್ಕೋಸ್ಕರ ತ್ಯಾಗ ಮಾಡುವ ಉದಾಹರಣೆ ಸಹ ಅಹ್ಮದಿಯಾ ಜಮಾಅತಿನಲ್ಲಿ ಕಾಣಿಸುತ್ತವೆ. ಇಸ್ಲಾಮಿನ ತಬ್‌ಲೀಗ್‌ಗೋಸ್ಕರ ಜೀವಿತವನ್ನು ಅರ್ಪಿಸಲು ಆವಶ್ಯಪಟ್ಟರೆ. ನಿಷ್ಠಾವಂತರಾದ ಜನರು ಆ ಕೆಲಸಕ್ಕೋಸ್ಕರ ತಮ್ಮನ್ನು ಅರ್ಪಿಸಲು ಮುಂದೆ ಬರುತ್ತಾರೆ. ಇನ್ನು ಜೀವಾರ್ಪಣೆಯ ವಾಸ್ತವಿಕ ಉದಾಹರಣೆಗಳನ್ನು ನೋಡಬೇಕಾದರೆ ಅಹ್ಮದಿಯಾ ಜಮಾಅತಿನ ಚರಿತ್ರೆ ಈ ವಾಸ್ತವಿಕ ಜೀವದಾನದ ಉದಾಹರಣೆಗಳಿಂದ ತುಂಬಿದೆ.

ಒಟ್ಟಿನಲ್ಲಿ, ಅಲ್ಲಾಹನ ಆಜ್ಞೆಗಳ ಪ್ರಕಾರ ಅರ್ಪಿಸುವ ಬಲಿದಾನಗಳ ಮತ್ತು ಅಲ್ಲಾಹನಿಗೋಸ್ಕರ ಮಾಡುವ ಬಲಿದಾನಗಳ ಉದಾಹರಣೆಗಳನ್ನು ಸ್ಥಾಪಿಸಲು ಇಂದಿನ ಕಾಲದಲ್ಲಿ ಅಲ್ಲಾಹನು ಅಹ್ಮದಿಯಾ ಜಮಾಅತನ್ನು ನಿರ್ಮಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಂದಿನ ಕಾಲದಲ್ಲಿ ಎಂತಹ ಜಮಾಅತನ್ನು ನೀಡಿರುವನೆಂದರೆ ಈ ಜಮಾಅತಿಗೆ ಸೇರಿದ ಬಹುತೇಕ ಜನರು ಸಂಪತ್ತು, ಜೀವ, ಸಮಯ ಮತ್ತು ಗೌರವಗಳನ್ನು ಬಲಿದಾನ ನೀಡುವ ಆತ್ಮವನ್ನು ಮನವರಿಕೆ ಮಾಡಿ ಕೊಂಡವರಾಗಿದ್ದಾರೆ ಮತ್ತು ಅದಕ್ಕೋಸ್ಕರ ಅವರು ಸದಾ ಸಿದ್ಧರಾಗಿರುತ್ತಾರೆ. ಆದರೆ, ಕೆಲವು ಜನರು ತಮ್ಮ ಅಜ್ಞಾನದ ಕಾರಣದಿಂದ ಎಂತಹ ಮಾತುಗಳನ್ನು ಆಡುತ್ತಾರೆಂದರೆ ಅಂತಹ ಮಾತು ಸತ್ಯವಿಶ್ವಾಸಿಯಾದವನಿಗೆ ಶೋಭಿಸುವುದಿಲ್ಲ. ಅವರ ಮಾತುಗಳಿಂದ ಕಡಿಮೆ ತರಬೇತಿ ಪಡೆದವರು ಮತ್ತು ಎಳಸು ಬುದ್ಧಿಯ ಜನರು ಆವಶ್ಯಕ್ಕಿಂತ ಹೆಚ್ಚು ಪ್ರಭಾವಿತರಾಗುತ್ತಾರೆ. ಕೆಲವು ಜನರು ನನಗೆ ಸಹ ಬರೆಯುತ್ತಾರೆ. ಈ ಪರೀಕ್ಷೆಯ ಕಾಲ ದೀರ್ಘವಾಗುತ್ತಾ ಹೋಗುತ್ತಿದೆ ಎಂದು ಬರೆಯುತ್ತಾರೆ. ಕಷ್ಟದ ಮತ್ತು ಪರೀಕ್ಷೆಯ ಕಾಲ ದೀರ್ಘವಾಗುತ್ತಾ ಹೋಗುತ್ತಿದೆ, ಅಲ್ಲಾಹನು ಬೇಗನೆ ಸುಲಭದ ಕಾಲವನ್ನು ಉಂಟುಮಾಡಲಿ ಎಂದು ಆಶಿಸುವುದರಲ್ಲಿ ತಪ್ಪೇನೂ ಇಲ್ಲ. ಯಾಕೆಂದರೆ, ಶತ್ರುಗಳ ದೌರ್ಜನ್ಯ ಅತ್ಯಂತ ಹೆಚ್ಚಾದಾಗ, ಸತ್ಯವಿಶ್ವಾಸಿಗಳು ಮಿತಿಮೀರಿ ಪರೀಕ್ಷಿಸಲ್ಪಡುವಾಗ ಅಲ್ಲಾಹನ ಸಂದೇಶವಾಹಕರೂ ಸತ್ಯವಿಶ್ವಾಸಿಗಳೂ **"ಮತಾ ನಸ್ರುಲ್ಲಾಹ್"** (ಅಲ್ಲಾಹನ ಸಹಾಯ ಎಲ್ಲಿ) ಎಂದು ಉಚ್ಚ ಸ್ವರದಿಂದ ಬೊಬ್ಬಿಟ್ಟು ಪ್ರಾರ್ಥನೆ ಮಾಡುತ್ತಾರೆ. ಆದರೆ, ಇಂತಹ ಸಂದರ್ಭಗಳಲ್ಲಿ ಲೌಕಿಕ ಮಾರ್ಗದ ಮೂಲಕ ಸಹಾಯವನ್ನು ಕೋರುವುದಕ್ಕಾಗಿ ಅಭಿಪ್ರಾಯ ಪ್ರಕಟಪಡಿಸುವುದು ಓರ್ವ ಸತ್ಯ ವಿಶ್ವಾಸಿಗೆ ಶೋಭೆ ತರುವುದಿಲ್ಲ. ಉದಾಹರಣೆಗೆ ನನಗೆ ಒಬ್ಬರು ಹೀಗೆ ಬರೆದರು: ಪಾಕಿಸ್ತಾನದಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ನಡೆಸಲಾಗುವ ದೌರ್ಜನ್ಯಗಳನ್ನು ನಾವು ಲೋಕದ ಜನರಿಗೆ ತಿಳಿಸಬೇಕು. M.T.A ಸಹ ತನ್ನ ಕಾರ್ಯಕ್ರಮಗಳ ದೊಡ್ಡ ಒಂದು ಭಾಗವನ್ನು ಇದಕ್ಕಾಗಿ ಮೀಸಲಾಗಿರಿಸಬೇಕು. ನಾವು ಲೋಕದ ಜನರಿಗೆ ಇದರ ಬಗ್ಗೆ ಮಾಹಿತಿ ನೀಡುತ್ತಾ ಇರಬೇಕು. ಬೇರೆ ಮಾರ್ಗಗಳನ್ನು ಸಹ ನಾವು ಅವಲಂಬಿಸಿಕೊಂಡು ನಮ್ಮ ವಿರುದ್ಧ ನಡೆಸಲಾಗುವ ದೌರ್ಜನ್ಯಗಳ ಬಗ್ಗೆ ಲೋಕದಲ್ಲಿ ಉಚ್ಚ ಧ್ವನಿಯಲ್ಲಿ ಪ್ರಚಾರ ಮಾಡಬೇಕು ಎಂದು.

ಈ ವಿಷಯದ ಬಗ್ಗೆ ನಾವು ನೆನಪಿಡಬೇಕಾದುದು ಮೊದಲನೆಯದಾಗಿ ಏನೆಂದರೆ ನಾವು ದೈವಿಕ ಜಮಾಅತ್ ಎಂದು ವಾದಿಸುತ್ತೇವೆ. ದೈವಿಕ ಜಮಾಅತ್‌ಗಳು ಲೌಕಿಕ ಸರಕಾರಗಳ ಸಹಾಯವನ್ನಾಗಲಿ ಅಥವಾ ಲೌಕಿಕರು ನಡೆಸುವ ರೀತಿಯ ಪ್ರತಿಭಟನೆಯನ್ನಾಗಲಿ ಅವಲಂಬಿಸುವುದಿಲ್ಲ. ದೈವಿಕ ಜಮಾಅತ್‌ಗಳ ಅಭಿವೃದ್ಧಿಯಲ್ಲಿ ಲೌಕಿಕ ಸಹಾಯವಾಗಲೀ ಕೈಯಾಗಲಿ ಪಾತ್ರ ವಹಿಸುವುದಿಲ್ಲ. ಲೌಕಿಕ ಸಹಾಯಗಳು ಶರತ್ತುಗಳಿಂದ ವಿರಹಿತವಾಗಿರುವುದಿಲ್ಲ. ಯಾವುದಾದರೂ ಸ್ವಾರ್ಥ ಉದ್ದೇಶದಿಂದ ವಿರಹಿತವಾಗಿರುವುದಿಲ್ಲ. ಸಹಾಯ ನೀಡುವವರ ಮುಂದೆ ಯಾವುದಾದರೊಂದು ರೀತಿಯಲ್ಲಿ ತಲೆಬಾಗದೆ ಅದು ದೊರಕುವುದೂ ಇಲ್ಲ. ಒಬ್ಬ ನೈಜ ಸತ್ಯ ವಿಶ್ವಾಸಿ ಇದನ್ನು ಎಂದೂ ಸಹಿಸಲಾರನು. **"ಮತಾನಸ್ರುಲ್ಲಾಹ್"** ಎಂಬ ಶಬ್ದವನ್ನು ಸತ್ಯ ವಿಶ್ವಾಸಿಗಳು

ಉಚ್ಚರಿಸುವಾಗ ಅದು ಅಲ್ಲಾಹನ ಸನ್ನಿಧಿಯಲ್ಲಿ ಸಮರ್ಪಿಸುವ ಪ್ರಾರ್ಥನೆಯಾಗಿದೆ. ಅವನ ಮುಂದೆ ತಲೆಬಾಗಿ ಮಾಡುವ ಪ್ರಾರ್ಥನೆಯಾಗಿದೆ. ಪ್ರತಿಯೊಂದು ಪರೀಕ್ಷೆಯ ಕಾಲವನ್ನು ನಾವು ದಾಟಿಹೋಗುವಾಗ, ಅಲ್ಲಾಹನ ಮುಂದೆ ಬಾಗುತ್ತಾ ಅವನ ಅನುಗ್ರಹವನ್ನು ಬೇಡಿಕೊಳ್ಳುತ್ತಾ ಇರುವಾಗಲೆಲ್ಲಾ, ಅಲ್ಲಾಹನ ಸಹಾಯವನ್ನು ಕೋರುತ್ತಿರುವಾಗಲೆಲ್ಲಾ ಅಭಿವೃದ್ಧಿಯ ಹೊಸ ಹೊಸ ಮಾರ್ಗಗಳು ನಮ್ಮ ಮುಂದೆ ತೆರೆಯುತ್ತಾ ಹೋಗುವುವು.

ಈ ಪರೀಕ್ಷೆಗಳು ಅಹ್ಮದಿಯಾ ಜಮಾಅತಿಗೆ ಅಭಿವೃದ್ಧಿಯ ಹೊಸ ಹೊಸ ಮಾರ್ಗಗಳನ್ನು ತೆರೆಯುತ್ತಾ ಇವೆ. ಮತ್ತು ಅಹ್ಮದಿಯಾ ಜಮಾಅತ್ ಹೊಸ ಹೊಸ ಮಜಲುಗಳನ್ನು ದಾಟಿಹೋಗುತ್ತಿವೆ ಎಂಬುದಕ್ಕೆ ಲೋಕದಾದ್ಯಂತ ಹರಡಿರುವ ಅಹ್ಮದಿಯಾ ಜಮಾಅತಿನ ಸದಸ್ಯರು ಮತ್ತು 204 ದೇಶಗಳಲ್ಲಿ ವಾಸಿಸುವ ಅಹ್ಮದಿಯರು ಸಾಕ್ಷಿಗಳಾಗಿದ್ದಾರೆ. ಆದುದರಿಂದ ಒಂದು ದೇಶದಲ್ಲಿ ಪರೀಕ್ಷೆಯ, ಕಷ್ಟದ ಕಾಲ ದೀರ್ಘವಾಗುತ್ತಾ ಹೋಗುತ್ತಿದೆ ಎನ್ನುವುದರ ಬಗ್ಗೆ ನಾವು ಗಾಬರಿಗೊಳ್ಳಬೇಕಾಗಿಲ್ಲ. ಅಲ್ಲಾಹನ ಅನುಗ್ರಹಗಳು ಎಷ್ಟು ವಿಶಾಲವಾಗಿ ಹರಡುತ್ತಿವೆ ಎನ್ನುವುದನ್ನು ನೋಡಬೇಕು. ಲೌಕಿಕ ಸಾಮಾಗ್ರಿಗಳನ್ನು ಸಹ ಉಪಯೋಗಿಸಬೇಕೆಂದು ಹೇಳುವುದಾದರೆ ಅಂತಹ ಉಪಯೋಗ ನಿಷಿದ್ಧವೇನೂ ಅಲ್ಲ. ಅಲ್ಲಾಹನ ಅನುಗ್ರಹದಿಂದ ಅವನು ನಿಶ್ಚಯಿಸಿದ ಪರಿಮಿತಿಯೊಳಗೆ ಇದ್ದುಕೊಂಡು ಲೌಕಿಕ ಮಾರ್ಗಗಳನ್ನು ಬಳಸಬಹುದಾಗಿದೆ. ನಾವು ಲೌಕಿಕ ಮಾರ್ಗಗಳನ್ನು ಬಳಸುತ್ತಲೂ ಇದ್ದೇವೆ. ನಮ್ಮ ಜಮಾಅತಿನ ಮೇಲೆ ನಡೆಸಲಾಗುವ ದೌರ್ಜನ್ಯಗಳ ಬಗ್ಗೆ ಲೋಕಕ್ಕೆ ನಾವು ತಿಳಿಸುತ್ತಾ ಇದ್ದೇವೆ. ಅಷ್ಟು ಮಾತ್ರವಲ್ಲ, ಲೋಕವು ಒಟ್ಟಾಗಿ ಈ ದೌರ್ಜನ್ಯಗಳನ್ನು ನಿವಾರಿಸಲು ಪ್ರಯತ್ನಿಸದಿದ್ದರೆ ದೌರ್ಜನ್ಯಗಳು ಲೋಕದಾದ್ಯಂತ ಹರಡುವುವು ಎಂದು ಸಹ ನಾವು ಲೋಕಕ್ಕೆ ತಿಳಿಸುತ್ತಾ ಇದ್ದೇವೆ. ಇದು ಕೇವಲ ಜಮಾಅತ್‌ಗೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಯಾವ ಮನುಷ್ಯನೂ ದೌರ್ಜನ್ಯದಿಂದ ಸುರಕ್ಷಿತನಾಗಿರಲಾರನು ಎಂದು ನಾವು ಲೋಕಕ್ಕೆ ತಿಳಿಸುತ್ತಿದ್ದೇವೆ. ಇದು ಲೋಕದೆಲ್ಲೆಡೆ ಹಬ್ಬುತ್ತಾ ಇದೆ. ಲೋಕವು ಇದನ್ನು ನೋಡುತ್ತಾ ಇದೆ. ಹೀಗಿದ್ದರೂ ನಾವು ಯಾವುದಾದರೂ ಸರಕಾರವನ್ನಾಗಲೀ ಮಾನವ ಹಕ್ಕುಗಳನ್ನು ಸಂರಕ್ಷಿಸುವ ಸಂಸ್ಥೆಯನ್ನಾಗಲಿ ಅವಲಂಬಿಸಿ ಅವರ ಬಗ್ಗೆ ಭರವಸೆ ಹೊಂದಿಲ್ಲ. ನಾವು ಭರವಸೆ ಇಟ್ಟಿರುವುದು ಅಲ್ಲಾಹನಲ್ಲಿ ಮಾತ್ರವಾಗಿದೆ.

ಒಟ್ಟಿನಲ್ಲಿ, ನಮ್ಮ ಯೋಚನೆ ಮತ್ತು ಲೌಕಿಕ ಜನರ ಯೋಚನೆಗಳಲ್ಲಿ ಬಹಳ ವ್ಯತ್ಯಾಸಗಳಿವೆ. ನಾವು ಈ ಕಾಲಘಟ್ಟದ ಇಮಾಮರಲ್ಲಿ ಬೈಅತ್ ಮಾಡಿದ್ದೇವೆ. ಅವರೊಂದಿಗೆ ಅಲ್ಲಾಹನು ಅವರು ಜಯಶಾಲಿಯಾಗುವರೆಂದು ವಾಗ್ದಾನಗಳನ್ನು ಮಾಡಿರುವನು. ವಿಜಯದ ಹೊಸ ಹೊಸ ಬಾಗಿಲುಗಳು ತೆರೆಯಲ್ಪಡುವ ಬಗ್ಗೆ ವಾಗ್ದಾನಗಳಿವೆ. ನಾವು ಅವುಗಳು ಈಡೇರುತ್ತಾ ಇರುವ ದೃಶ್ಯಗಳನ್ನು ಕಾಣುತ್ತಾ ಇದ್ದೇವೆ. ಆದರೆ ಇತರರಿಗೆ ಇಂತಹ ವಾಗ್ದಾನಗಳಿಲ್ಲ. ಶಿಯಾ ಪಂಥದವರ ಉದಾಹರಣೆ ನೀಡಲಾಗುತ್ತದೆ. ಮತ್ತು ಬೇರೆಯವರ ಉದಾಹರಣೆಗಳನ್ನೂ ನೀಡಲಾಗುತ್ತದೆ. ಆದರೆ ಅಂತಹ ಜನರು ಪ್ರತಿಭಟನೆಗಳ ಮೂಲಕ ತಮ್ಮ ಉದ್ದೇಶಿತ ಗುರಿಯನ್ನು ಸಾಧಿಸಿದರೆಂದು ನನಗೆ ಎಲ್ಲಿಯೂ ಕಾಣಿಸುವುದಿಲ್ಲ. ಹೌದು, ವಿಧ್ವಂಸಕ ಕೆಲಸ, ಗೆರಾವು, ಸುಟ್ಟುಹಾಕುವಿಕೆ ಮೊದಲಾದುವು ನಿಶ್ಚಯವಾಗಿಯೂ ಎಲ್ಲಾ ಸ್ಥಳಗಳಲ್ಲೂ ನಡೆಯುತ್ತಿವೆ. ಆದರೆ ಇವುಗಳ ಕಾರಣದಿಂದ ಗಲಬೆ ಗೊಂದಲಗಳು ಹೆಚ್ಚಾಗುತ್ತಲೇ ಇವೆ.

ನಾವು ಇನ್ನೊಂದು ವಿಷಯವನ್ನು ಸಹ ನೆನಪಿನಲ್ಲಿಡಬೇಕು. ನಮ್ಮ ಜಮಾಅತ್ ವಿರುದ್ಧ ಪಾಕಿಸ್ತಾನದಲ್ಲಿ ಅಥವಾ ಬೇರೆ ದೇಶಗಳಲ್ಲಿ ನಮ್ಮ ವಿರೋಧಿ ಜನರಿಂದ ಅಥವಾ ಸರಕಾರದಿಂದ ನಡೆಯುವ ದೌರ್ಜನ್ಯಗಳು, ಸರಕಾರಿ ನಿಯಮಗಳ ಮೂಲಕ ಅಥವಾ ಬೇರೆ ವಿಧಾನಗಳಿಂದ ನಡೆಸಲಾಗುವ ದೌರ್ಜನ್ಯಗಳು ಇವುಗಳು ಇಂದಿನ ಕಾಲದಲ್ಲಿ ಪ್ರಾರಂಭವಾದುದೇನೂ ಅಲ್ಲ. ಕೇವಲ ಎರಡು ಮೂರು ದಶಕಗಳಿಂದ ನಡೆಯುತ್ತಿರುವುದೇನೂ ಅಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನು ಮಸೀಹ್ ಮೌಊದ್ ಆಗಿರುವೆನೆಂದು ವಾದಿಸಿ ಒಂದು ಜಮಾಅತನ್ನು ಸ್ಥಾಪಿಸಿದ ಮೊದಲುಗೊಂಡು ಈ ದೌರ್ಜನ್ಯಗಳು ಆರಂಭಗೊಂಡವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮತ್ತು ಅವರ ಜಮಾಅತ್ ಆರಂಭದಿಂದಲೇ ದೌರ್ಜನ್ಯಗಳನ್ನೂ ಕಷ್ಟಗಳನ್ನೂ ಅನುಭವಿಸುತ್ತಾ ಬಂದಿದೆ. ಮಾತ್ರವಲ್ಲ ಒಮ್ಮೆ ಎಂತಹ ಪರಿಸ್ಥಿತಿ ಉಂಟಾಯಿತೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬದ ಮಾಲಿಕತ್ವದಲ್ಲಿ ದೀರ್ಘಕಾಲವಿದ್ದ ಖಾದಿಯಾನನ್ನು ಬಿಟ್ಟು ಅವರು ಬೇರೆ ಕಡೆಗೆ ಹೋಗಬೇಕಾದೀತು ಎಂಬ ಯೋಚನೆ ಸಹ ತಲೆದೋರಿತು. ಅವರು ಅಲ್ಲಿಯೂ ಸುರಕ್ಷಿತರಾಗಿರಲಿಲ್ಲ.

ನಾವು ಹಿಂದಿನ ಕಾಲದ ಚರಿತ್ರೆಯನ್ನು ಪರಾಂಬರಿಸುವುದಾದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಜೀವನ ಕಾಲವು ಶತ್ರುಗಳಿಂದ ದೌರ್ಜನ್ಯದ ಮೇಲೆ ದೌರ್ಜನ್ಯವನ್ನು ಕಾಣುತ್ತಾ ದಾಟಿಹೋಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸ್ಸಲ್ಲಮರು ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿಯೂ ಉದಾಹರಣೆಗಳನ್ನು ಸ್ಥಾಪಿಸಿದರು. ಅವರ ಶಿಷ್ಯರು ಬಲಿದಾನದ ಉದಾಹರಣೆಗಳನ್ನು ತೋರಿಸಿದರು. ಯಾಕೆಂದರೆ, ಅಲ್ಲಾಹನ ವಾಗ್ದಾನಗಳು ಮತ್ತು ಅಲ್ಲಾಹನ ಉಪದೇಶಗಳು ಅವರ ಕಣ್ಣುಗಳ ಮುಂದಿದ್ದುವು.

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನೆರಳಿನ ರೂಪದಲ್ಲಿ** ಆಗಮಿಸಿದುದರಿಂದ ಅವರು ತನ್ನನ್ನು ನಂಬಿದವರೊಂದಿಗೆ ಹೇಳಿದರು: **"ನನ್ನ ವಿರುದ್ಧ ಮತ್ತು ನನ್ನ ಜಮಾಅತಿನ ವಿರುದ್ಧ ದೌರ್ಜನ್ಯ ಮತ್ತು ಕಷ್ಟದ ಕಾಲಘಟ್ಟ ಬರಲಿರುವುದು"** ಅವರು ಸ್ಪಷ್ಟವಾಗಿ ಹೇಳಿದರು: **"ನನ್ನ ಮಾರ್ಗ ಹೂಗಳನ್ನು**

**ಹಾಸಿರುವಂತದಲ್ಲ. ಮುಳ್ಳುಗಳ ಮೇಲೆ ನೀವು ನಡೆಯಬೇಕಾಗಬಹುದು**" ಎಂದು. ಅವರು ಯಾರಿಗೂ ಯಾವರೀತಿಯ ಮೋಸವನ್ನೂ ಮಾಡಲಿಲ್ಲ. ಅಹ್ಮದಿಯಾ ಜಮಾಅತ್‌ಗೆ ಸೇರುವ ಪ್ರತಿಯೊಬ್ಬನೂ ಕಷ್ಟವನ್ನು ತನಗೆ ಸಹಿಸಬೇಕಾಗಬಹುದು ಎಂದು ಮನವರಿಕೆ ಮಾಡಿಕೊಂಡೇ ಜಮಾಅತನ್ನು ಪ್ರವೇಶಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಹಝ್ರತ್ **ಸಾಹಿಬ್‌ಝಾದ ಅಬ್ದುಲ್ಲತೀಫ್ ಶಹೀದ್**‌ರೊಂದಿಗೆ ಅಫ್‌ಗಾನಿಸ್ತಾನದ ಬಾದಶಹ ಪದೇ ಪದೇ ಒತ್ತಾಯ ಪೂರ್ವಕ ಹೇಳಿದನು. "ನೀನು ವಾಗ್ದತ್ತಾ ಮಸೀಹ್ ಎಂದು ವಾದಿಸುವವನನ್ನು ನಂಬಿರುವೆ. ಅದನ್ನು ನೀನು ನಿರಾಕರಿಸಿದರೆ ನಿನ್ನ ಜೀವವನ್ನು ರಕ್ಷಿಸುವೆನು" ಎಂದು. ಬಾದಶಹ ಈ ಪ್ರಲೋಭನೆ ಬಹಳ ಸಲ ನೀಡಿದರೂ ಪ್ರತಿ ಸಲ ಹಝ್ರತ್ ಅಬ್ದುಲ್ಲತೀಫ್ ಸಾಹಿಬ್ ಹೇಳಿದರು: "**ಈ ದಿನ ಅಲ್ಲಾಹನು ನನಗೆ ನೀಡುವ ಮೃತ್ಯು ನನ್ನನ್ನು ಅವನ ಬಹುಮಾನಗಳ ವಾರೀಸುದಾರನನ್ನಾಗಿ ಮಾಡುವುದಾಗಿರುವಾಗ ನಾನು ಲೋಕಕ್ಕೋಸ್ಕರ ಅದನ್ನು ಏಕೆ ತಿರಸ್ಕರಿಸಲಿ. ನೀನು ವಿಚಿತ್ರ ಅಜ್ಞಾನದ ಪ್ರಶ್ನೆ ನನ್ನನ್ನು ಕೇಳುತ್ತಿರುವೆ ಅಥವಾ ನನ್ನೊಂದಿಗೆ ವಿಚಿತ್ರವಾಗಿ ವ್ಯವಹರಿಸುತ್ತಿರುವೆ.**"

ಸತ್ಯವಿಶ್ವಾಸಿಯ ವೈಭವ ಈರೀತಿ ಇರುತ್ತದೆ. ಅಲ್ಲಾಹನು ಹೀಗೆ ಹೇಳಿದ್ದಾನೆ:

**ಫಮಾ ವಹನೂ ಲಿಮಾ ಅಸಾಬಹುಮ್ ಫೀ ಸಬೀಲಿಲ್ಲಾಹಿ ವಮಾ ಝುಉಫೂ**

**ವ ಮಸ್ತಕಾನೂ ವಲ್ಲಾಹು ಯುಹಿಬ್ಬುಸ್ಸಾಬಿರೀನ್.**

"ಅಲ್ಲಾಹನ ಮಾರ್ಗದಲ್ಲಿ ಅವರಿಗೆದುರಾದ ಅಡೆತಡೆಗಳ ಕಾರಣದಿಂದ ಅವರಿಗೆ ಅಧೈರ್ಯವುಂಟಾಗಲಿಲ್ಲ. ಅವರು ಶಕ್ತಿಗುಂದಲಿಲ್ಲ. ಹಾಗೂ ಅವರು(ಶತ್ರುಗಳ ಮುಂದೆ) ತಲೆ ತಗ್ಗಿಸಲಿಲ್ಲ. ಸ್ಥಿರಚಿತ್ತರಾಗಿ ಉಳಿಯುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ." (ಪವಿತ್ರ ಖುರ್‌ಆನ್ 3:147)

ಇಂದು ಸಹ ನಮ್ಮ ಶತ್ರುಗಳಿಗಿರುವ ಕಷ್ಟವೇನೆಂದರೆ: "ಈ ಜಮಾಅತಿನ ಜನರು ಬಲಹೀನತೆ ಏಕೆ ಪ್ರದರ್ಶಿಸುವುದಿಲ್ಲ.? ನಮ್ಮ ದೌರ್ಜನ್ಯಗಳ ಕಾರಣ ನಮ್ಮ ಮುಂದೆ ಏಕೆ ತಲೆಬಾಗುವುದಿಲ್ಲ?" ಎಂದಾಗಿದೆ. ಆ ಜನರಿಗೆ ಒಂದು ವಿಷಯ ತಿಳಿದಿಲ್ಲ! ಒಬ್ಬ ನಿಜವಾದ ಅಹ್ಮದಿ ಯಾವಾಗಲೂ ಅಲ್ಲಾಹನ ಮೇಲೆ ದೃಷ್ಟಿ ಇರಿಸಿರುತ್ತಾನೆ. ಅಲ್ಲಾಹನ ಸಂಪ್ರೀತಿ ಗಳಿಸಲು ಯಾವಾಗಲೂ ಪ್ರಯತ್ನ ಮಾಡುತ್ತಾ ಇರುತ್ತಾನೆ. ಅಲ್ಲಾಹನು ತನ್ನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಒಂದು ಪ್ರಾರ್ಥನೆಯನ್ನು ಸಹ ಕಲಿಸಿದ್ದಾನೆ.

ಯಾವಾಗಲೂ ಸ್ಥಿರತೆಗೋಸ್ಕರ ಪ್ರಾರ್ಥಿಸುತ್ತಾ ಇರಬೇಕು. ಏಕೆಂದರೆ ಸತ್ಯ ವಿಶ್ವಾಸದ ಬಲಪಡಿಸುವಿಕೆ ಅಲ್ಲಾಹನ ಕಡೆಯಿಂದಲೇ ಲಭಿಸುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಬಗ್ಗೆ ಹೀಗೆ ಹೇಳುತ್ತಾರೆ: "ನಮ್ಮ ಪ್ರಭು ಅಲ್ಲಾಹನು ಎಂದು ಹೇಳಿ ಮಿಥ್ಯ ದೈವಗಳಿಂದ ದೂರ ಸರಿದು ಸ್ಥಿರಚಿತ್ತತೆಯಿಂದ ವರ್ತಿಸಿ ವಿವಿಧ ರೀತಿಯ ಪರೀಕ್ಷೆಗಳ ಮತ್ತು ವಿಪತ್ತುಗಳ ಕಾಲದಲ್ಲಿ ವಿಶ್ವಾಸ ದಾರ್ಢ್ಯತೆಯಿಂದ ವರ್ತಿಸುವವರ ಮೇಲೆ ದೇವ ದೂತರು ಇಳಿದು ಹೇಳುತ್ತಾರೆ:– ನಿವು ಹೆದರಬೇಡಿರಿ, ನೀವು ದುಃಖಿಸಬೇಡಿರಿ, ನೀವು ಸಂತೋಷಭರಿತರಾಗಿರಿ. ನಿಮಗೆ ವಾಗ್ದಾನ ನೀಡಲಾದ ಸಂತೋಷದ ವಾರೀಸುದಾರರು ನೀವು ಆಗಿರುವಿರಿ. ನಾವು ಇಹಲೋಕ ಜೀವಿತದಲ್ಲೂ ಪರಲೋಕದಲ್ಲೂ ನಿಮ್ಮ ಸ್ನೇಹಿತರಾಗಿರುವೆವು."

ಇದರಿಂದ ತಿಳಿಯುವುದೇನೆಂದರೆ ಸ್ಥಿರಚಿತ್ತತೆಯಿಂದ ಅಲ್ಲಾಹನ ಸಂಪ್ರೀತಿ ಲಭಿಸುತ್ತದೆ. **'ಇಸ್ತಿಖಾಮತ್ ಫೌಖಲ್ ಕರಾಮತ್'** (ಸ್ಥಿರತೆ ಕರಾಮತ್‌ಗಿಂತ ಮೇಲೆ) ಎಂದು ಹೇಳಿದುದು ಸತ್ಯವಾಗಿದೆ. ಸ್ಥಿರಚಿತ್ತತೆ ಎಂದರೆ ನಾಲ್ಕು ದಿಕ್ಕುಗಳಿಂದಲೂ ವಿಪತ್ತುಗಳು ಸುತ್ತುವರಿದಿರುವುದನ್ನು ಕಾಣುವಾಗ, ಅಲ್ಲಾಹನ ಮಾರ್ಗದಲ್ಲಿ ಜೀವ, ಗೌರವ, ಅಭಿಮಾನ ಅಪಾಯದಲ್ಲಿ ಇರುವುದನ್ನು ಕಂಡಾಗ, ಸಮಾಧಾನ ನೀಡುವ ಯಾವ ವಿಷಯವೂ ಇಲ್ಲದಿರುವಾಗ, ಅಲ್ಲಾಹನು ಸಹ ಪರೀಕ್ಷೆಯ ರೂಪದಲ್ಲಿ ಸಮಾಧಾನ ನೀಡುವ ಕಶ್ಫ್(ದರ್ಶನ) ಸ್ವಪ್ನ, ಅಥವಾ ಸಂದೇಶವಾಣಿಯನ್ನು ನಿಲ್ಲಿಸಿ ಭಯ ಭೀತಿಯಲ್ಲಿ ಬಿಟ್ಟಿರುವಾಗ ಅಂತಹ ಸಂದರ್ಭದಲ್ಲಿ ಸಹ ನಿರಾಶನಾಗಿ ಹೇಡಿಯ ಹಾಗೆ ಹಿಂದೆ ಸರಿಯದೆ, ನಿಷ್ಠೆಗೆ ಭಂಗವುಂಟಾಗದಂತೆ, ಸತ್ಯ ಮತ್ತು ಸ್ಥಿರತೆಗೆ ಭಂಗವುಂಟಾಗದಂತೆ ವರ್ತಿಸಿ, ಮರಣವನ್ನು ಸಹ ಸಂತೋಷದಿಂದ ಸ್ವೀಕರಿಸಲು ಸಿದ್ಧನಾಗಿ, ಯಾವುದೇ ಸ್ನೇಹಿತನು ಸಹಾಯಕ್ಕೆ ಬರುವನೆಂದು ಪ್ರತೀಕ್ಷಿಸದೆ ಇರುವುದೇ ಪರಿಪೂರ್ಣವಾದ ಸ್ಥಿರಚಿತ್ತತೆ ಆಗಿದೆ,

ನಮ್ಮಲ್ಲಿ ಪ್ರತಿಯೊಬ್ಬರೂ ಇಂತಹ ಸ್ಥಿತಿಯನ್ನು ಗಳಿಸಲು ಪ್ರಯತ್ನಿಸಬೇಕು. ಆದರೆ, ಅಲ್ಲಾಹನ ಅನುಗ್ರಹ ಮೂಲಕ ಮಾತ್ರ ಇದನ್ನು ಗಳಿಸಲು ಸಾಧ್ಯ. ಮನುಷ್ಯನು ಎಲ್ಲಾ ರೀತಿಯ ಬಲಿದಾನಗಳನ್ನು ನೀಡಲು ಸಿದ್ಧನಾದಾಗ ಅಲ್ಲಾಹನು ಅವನನ್ನು ಬಿಟ್ಟುಬಿಡಲಾರನು. ಅವನು ತನ್ನ ದಾಸನನ್ನು ಬೆಂಬಲಿಸುತ್ತಾನೆ. ಅವನು ಸ್ವರ್ಗದ ವಾಗ್ದಾನವನ್ನು ನೀಡುತ್ತಾನೆ. ಆದುದರಿಂದ ಅಲ್ಲಾಹನು ಸ್ಥಿರತೆ ಗಳಿಸುವ ಪ್ರಾರ್ಥನೆಯನ್ನೂ ಶತ್ರುಗಳ ಮೇಲೆ ಜಯ ಗಳಿಸುವ ಪ್ರಾರ್ಥನೆಯನ್ನೂ ಕಲಿಸಿದ್ದಾನೆ. ಇದರ

ಅರ್ಥವೇನೆಂದರೆ, ಅಲ್ಲಾಹನು ಈ ಪ್ರಾರ್ಥನೆಗಳನ್ನು ಅಂಗೀಕರಿಸಿ ವಿಜಯದ ಎಂತಹ ಬಾಗಿಲುಗಳನ್ನು ತೆರೆಯುವನು ಎಂದರೆ ಶತ್ರುಗಳಿಗೆ ಓಡಿ ಹೋಗಲು ಸ್ಥಳ ಲಭಿಸಲಾರದು. ಇನ್‌ಶಾ ಅಲ್ಲಾಹ್ – ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ವಿಜಯದ ವಾಗ್ದಾನಗಳು ಖಂಡಿತವಾಗಿಯೂ ಈಡೇರುವುವು. ಕೊನೆಯ ಜಯ ನಮಗೆಯೇ ಸಿಗುವುದು.

ಇಂದು ಸಹ, ಬಲಿದಾನ ಅರ್ಪಿಸುವವರ ದಾಖಲೆಗಳನ್ನು ಬರೆದವರಲ್ಲಿ ಒಬ್ಬರಾಗಿ ಮತ್ತು ಅಲ್ಲಾಹನಿಂದ ಸ್ವರ್ಗದ ಶುಭವಾರ್ತೆ ಪಡೆದವರಲ್ಲಿ ಒಬ್ಬರಾಗಿ ನಮ್ಮ ಒಬ್ಬ ಸಹೋದರ ಸೇರಿರುವರು. ಅವರ ಹೆಸರು **ಖಲೀಲ್ ಅಹ್ಮದ್ ಸಾಹೇಬ್ ಇಬ್ನು ಪತ್‌ಹ್ ಮುಹಮ್ಮದ್ ಸಾಹೇಬ್**. ಶೇಖ್‌ಪುರ ಜಿಲ್ಲೆಯ ಭೋಯಿವಾಲ್‌ನಲ್ಲಿ **16–5–2014**ರಂದು ಅವರನ್ನು ಶಹೀದ್ ಮಾಡಲಾಯಿತು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಸಂಭವ ಈರೀತಿಯಿದೆ, 13–5–2014 ರಂದು ಶತ್ರುಗಳು ನಮ್ಮ ವಿರುದ್ಧ ಅಂಟಿಸಿದ್ದ ಸ್ಟಿಕ್ಕರ್‌ಗಳನ್ನು ಅಹ್ಮದಿಯರು ತೆಗೆದು ಹಾಕಿದಾಗ ಜಗಳ ಪ್ರಾರಂಭವಾಯಿತು. ಇದನ್ನು ಹೇತು ಮಾಡಿಕೊಂಡು ಜಮಾಅತಿಗೆ ವಿರುದ್ಧವಾಗಿ ಘೋಷಣೆಗಳನ್ನು ಕೂಗುತ್ತಾ ಊರಲ್ಲಿ ಮೆರವಣಿಗೆ ನಡೆಸಿದರು. ಜಮಾಅತ್ ವಿರುದ್ಧ ರೊಚ್ಚಿಗೆಬ್ಬಿಸುವ ಭಾಷಣಗಳನ್ನು ಲೌಡ್ ಸ್ಪೀಕರ್ ಬಳಸಿ ಮಾಡಿ ರಸ್ತೆ ಸಂಚಾರಕ್ಕೆ ತಡೆಯೊಡ್ಡಿ ಅಹ್ಮದಿಯರ ವಿರುದ್ಧ ಮೊಕದ್ದಮೆ ದಾಖಲಿಸುವಂತೆ ಪೋಲೀಸರನ್ನು ಒತ್ತಾಯಿಸಿದರು. ನಾಲ್ಕು ಅಹ್ಮದಿಯರ ವಿರುದ್ಧ ಮೊಕದ್ದಮೆ ದಾಖಲಿಸಲಾಯಿತು. ಅವರಲ್ಲಿ ಖಲೀಲ್ ಅಹ್ಮದ್ ಸೇರಿದ್ದರು. ಖಲೀಲ್ ಅಹ್ಮದ್ ಸಾಹೇಬ್ ಮತ್ತು ಇತರ ಅಹ್ಮದಿಯರು ಪೋಲೀಸರ ವಶದಲ್ಲಿದ್ದಾಗ 2014 ಮೇ 16ರಂದು ಶುಕ್ರವಾರ ಮಧ್ಯಾಹ್ನ 12:15ರ ವೇಳೆಗೆ, 'ನಾನು ಅವರಿಗೆ ಆಹಾರ ನೀಡಲು ಬಂದಿರುವೆನು' ಎಂದು ಹೇಳುತ್ತಾ ಸಮೀಪದ ಗ್ರಾಮ ವಾಸಿಯಾದ ಯುವಕನೋರ್ವ ಠಾಣೆಯೊಳಗೆ ಪ್ರವೇಶಿಸಿದನು. ಆತ ಬಂಧಿಗಳ ಸಮೀಪ ಬಂದು ಖಲೀಲ್ ಸಾಹಿಬ್ ಯಾರು ಎಂದು ಕೇಳಿದ. ಗುರುತು ಲಭಿಸಿದೊಡನೆ ತಾನು ಬಚ್ಚಿಟ್ಟುಕೊಂಡಿದ್ದ ಪಿಸ್ತೂಲಿನಿಂದ ಖಲೀಲ್ ಅಹ್ಮದ್ ಸಾಹೇಬರ ಮುಖಕ್ಕೆ ಗುಂಡು ಹಾರಿಸಿದ! ನಂತರ ಆ ದೂರ್ತ ಇನ್ನೋರ್ವ ಅಹ್ಮದಿಯ ಮೇಲೂ ಗುಂಡು ಹಾರಿಸಲು ಪ್ರಯತ್ನಿಸಿದನಾದರೂ ಪಿಸ್ತೂಲಿನಿಂದ ಗುಂಡು ಹಾರಲಿಲ್ಲ. ಪೋಲೀಸರಂತೂ ಅಪರಾಧಿಯನ್ನು ಬಂಧಿಸಿದರು. ಖಲೀಲ್ ಅಹ್ಮದ್ ಸಾಹೇಬರನ್ನು ಲಾಕಪ್ಪಿನಿಂದ ಹೊರಗೆ ತರಲಾಯಿತಾದರೂ ಅಷ್ಟರಲ್ಲೇ ಅವರು ಶಹಾದತ್‌ನ ರುಚಿ ಅನುಭವಿಸಿ ಆಗಿ ಹೋಗಿತ್ತು– **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**.

--------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 23-05-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By**: Kannada Khutuba Desk** (comes under **Kannada Isha'at Team**)*

*Ahmadiyya Muslim Jama`at, Karnataka*

*Email*: **khutuba.kannada@gmail.com**